ಉ.ಕ. ಜಿಲ್ಲೆಗೆ ಶೇ. 91.9, ಅಗ್ರಸ್ಥಾನಕ್ಕೇರಿದ ಶಿರಸಿ

ಜಿಲ್ಲೆಯಾದ್ಯಂತ ಒಟ್ಟು 11,998 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು ಅವರಲ್ಲಿ 11,023 ಮಂದಿ ತೇರ್ಗಡೆ

• **ಕನ್ನಡಪ್ರಭ ವಾರ್ತೆ** ಕಾರವಾರ

2026ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶ ಪ್ರಕಟವಾಗಿದ್ದು, ಉತ್ತರ ಕನ್ನಡ ಜಿಲ್ಲೆಯು ಶೇ. 91.9ರಷ್ಟು ಉತ್ತೀರ್ಣ ಪ್ರಮಾಣ ದಾಖಲಿಸುವ ಮೂಲಕ ಅತ್ಯುತ್ತಮ ಸಾಧನೆ ಮೆರೆದಿದೆ. ಜಿಲ್ಲೆಯಾದ್ಯಂತ ಒಟ್ಟು 11,998 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಅವರಲ್ಲಿ 11,023 ವಿದ್ಯಾರ್ಥಿಗಳು ತೇರ್ಗಡೆಯಾಗುವ ಮೂಲಕ ಜಿಲ್ಲೆಯ ಶೈಕ್ಷಣಿಕ ಗುಣಮಟ್ಟವನ್ನು ಎತ್ತಿಹಿಡಿದಿದ್ದಾರೆ.

ಈ ಬಾರಿಯ ಫಲಿತಾಂಶದಲ್ಲಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಮೇಲುಗೈ ಸಾಧಿಸಿದ್ದು, ಅತಿ ಹೆಚ್ಚು ಅಂದರೆ ಶೇ. 94.7ರಷ್ಟು ಮಂದಿ ಪಾಸ್ ಆಗಿದ್ದಾರೆ. ಅದೇ ರೀತಿ ವಾಣಿಜ್ಯ ವಿಭಾಗದಲ್ಲಿ ಶೇ. 93.2ರಷ್ಟು ಹಾಗೂ ಕಲಾ ವಿಭಾಗದಲ್ಲಿ ಶೇ. 83.9ರಷ್ಟು ವಿದ್ಯಾರ್ಥಿಗಳು ಯಶಸ್ಸು ಕಂಡಿದ್ದಾರೆ ಎಂದು ಕಾರವಾರದ ಶಾಲಾ ಶಿಕ್ಷಣ ಇಲಾಖೆಯ (ಪದವಿ ಪೂರ್ವ) ಉಪ ನಿರ್ದೇಶಕರು ಅಂಕಿ-ಅಂಶಗಳೊಂದಿಗೆ ಮಾಹಿತಿ ನೀಡಿದ್ದಾರೆ.

ಜಿಲ್ಲೆಯ ತಾಲೂಕುವಾರು ಸಾಧನೆ ಗಮನಿಸಿದರೆ ಶಿರಸಿ ತಾಲೂಕು ಅತಿ ಹೆಚ್ಚು ಶೇ. 96.7ರಷ್ಟು ಫಲಿತಾಂಶ ದಾಖಲಿಸಿ ಜಿಲ್ಲೆಗೆ ಅಗ್ರಸ್ಥಾನದಲ್ಲಿದೆ. ಶಿರಸಿಯಿಂದ ಪರೀಕ್ಷೆ ಬರೆದ 948 ವಿದ್ಯಾರ್ಥಿಗಳಲ್ಲಿ 917 ಮಂದಿ ಉತ್ತೀರ್ಣರಾಗಿದ್ದಾರೆ. ಇನ್ನು ಕುಮಟಾ ತಾಲೂಕಿನ 1,089 ವಿದ್ಯಾರ್ಥಿಗಳಲ್ಲಿ 1,049 ಪಾಸ್ ಆಗಿದ್ದು ಶೇ. 96.3ರಷ್ಟು ಸಾಧನೆಯೊಂದಿಗೆ ದ್ವಿತೀಯ ಸ್ಥಾನದಲ್ಲಿದೆ. ಹೊನ್ನಾವರ ತಾಲೂಕಿನಿಂದ ಅತಿ ಹೆಚ್ಚು ಅಂದರೆ 2,234 ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಿದ್ದು, ಅವರಲ್ಲಿ ಶೇ. 92.9ರಷ್ಟು ಮಂದಿ ಉತ್ತೀರ್ಣರಾಗಿದ್ದಾರೆ.

ವಿಶೇಷವೆಂದರೆ ದಾಂಡೇಲಿ ತಾಲೂಕಿನಲ್ಲಿ ವಿಜ್ಞಾನ ವಿಭಾಗದಿಂದ ಪರೀಕ್ಷೆ ಬರೆದ ಎಲ್ಲಾ 6 ವಿದ್ಯಾರ್ಥಿಗಳು ಪಾಸ್ ಆಗುವ ಮೂಲಕ ಶೇ. 100 ರಷ್ಟು ಫಲಿತಾಂಶ ದಾಖಲಾಗಿದೆ. ಉಳಿದಂತೆ ಮುಂಡಗೋಡು ಶೇ. 93.8, ಜೋಯಿಡಾ ಶೇ. 92.4 ಮತ್ತು ಸಿದ್ದಾಪುರ ತಾಲೂಕು ಶೇ. 91.7ರಷ್ಟು ಫಲಿತಾಂಶದೊಂದಿಗೆ ಗಮನಾರ್ಹ ಸಾಧನೆ ತೋರಿವೆ.

ಕಾಲೇಜುಗಳ ಆಡಳಿತ ಮಂಡಳಿವಾರು ಫಲಿತಾಂಶ ಗಮನಿಸಿದರೆ, ಜಿಲ್ಲೆಯ ಅನುದಾನರಹಿತ ಪಿಯು ಕಾಲೇಜುಗಳು ಶೇ. 96.6ರಷ್ಟು ಉತ್ತೀರ್ಣ ಪ್ರಮಾಣದೊಂದಿಗೆ ಅತ್ಯುನ್ನತ ಸಾಧನೆ ದಾಖಲಿಸಿವೆ. ಈ ಕಾಲೇಜುಗಳ ಒಟ್ಟು 3,211 ವಿದ್ಯಾರ್ಥಿಗಳಲ್ಲಿ 3,103 ಮಂದಿ ಪಾಸ್ ಆಗಿದ್ದಾರೆ. ಸರ್ಕಾರಿ ಪಿಯು ಕಾಲೇಜುಗಳಲ್ಲಿ ಅತಿ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಒಟ್ಟು 5,681 ವಿದ್ಯಾರ್ಥಿಗಳಲ್ಲಿ 5,181 ಮಂದಿ ತೇರ್ಗಡೆಯಾಗುವ ಮೂಲಕ ಶೇ. 91.2ರಷ್ಟು ಉತ್ತಮ ಫಲಿತಾಂಶ ಕಾಯ್ದುಕೊಂಡಿವೆ. ಹಾಗೆಯೇ, ವಸತಿ ಕಾಲೇಜುಗಳಲ್ಲಿ ಶೇ. 91.6ರಷ್ಟು ಮತ್ತು ಅನುದಾನಿತ ಕಾಲೇಜುಗಳಲ್ಲಿ ಶೇ. 88.5ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ ಜಿಲ್ಲೆಯ ಒಟ್ಟಾರೆ ಸಾಧನೆಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ.

ಜಿಲ್ಲೆಯ ಟಾಪರ್‌ಗಳು

ಕಲಾ ವಿಭಾಗದಲ್ಲಿ ಭಟ್ಕಳದ ಅಂಜುಮನ್ ಮಹಿಳಾ ಪದವಿ ಪೂರ್ವ ಕಾಲೇಜಿನ ಶಿಫಾ ಆನಾಮ್ 591 ಅಂಕ ಪಡೆಯುವ ಮೂಲಕ ಜಿಲ್ಲೆಗೆ ಪ್ರಥಮ ಸ್ಥಾನ ಗಳಿಸಿದ್ದಾರೆ. ಕುಮಟಾ ತಾಲೂಕಿನ ಹಿರೇಗುತ್ತಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಜಾಹ್ನವಿ ಮಾಸ್ತಿ ಗೌಡ 587 ಅಂಕಗಳೊಂದಿಗೆ ದ್ವಿತೀಯ ಹಾಗೂ ಕಾರವಾರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಸಾಕ್ಷಿ ವಿನೋದ ನಾಯ್ಕ 585 ಅಂಕ ಗಳಿಸಿ ಜಿಲ್ಲೆಗೆ ತೃತೀಯ ಸ್ಥಾನ ಪಡೆದಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಹೊನ್ನಾವರದ ಎಸ್‌ಡಿಎಂ ಪದವಿ ಪೂರ್ವ ಕಾಲೇಜಿನ ಚಿನ್ಮಯ ಮಂಜುನಾಥ ಶೆಟ್ಟಿ 596 ಅಂಕಗಳೊಂದಿಗೆ ಜಿಲ್ಲೆಗೆ ಮೊದಲ ಸ್ಥಾನ ಪಡೆದು ಮಿಂಚಿದ್ದಾರೆ. ಶಿರಸಿಯ ಎಂಇಎಸ್ ಪದವಿ ಪೂರ್ವ ಕಾಲೇಜಿನ ಪ್ರಣವ್ ಎನ್. ಭಟ್ 594 ಅಂಕಗಳೊಂದಿಗೆ 2ನೇ ಸ್ಥಾನ ಹಾಗೂ ಭಟ್ಕಳದ ದಿ ನ್ಯೂ ಇಂಗ್ಲಿಷ್ ಪದವಿ ಪೂರ್ವ ಕಾಲೇಜಿನ ಸಂಜನಾ ನಾಗಪ್ಪ ನಾಯ್ಕ 593 ಅಂಕಗಳೊಂದಿಗೆ 3ನೇ ಸ್ಥಾನ ಹಂಚಿಕೊಂಡಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಶಿರಸಿಯ ಎಂಇಎಸ್ ಪದವಿ ಪೂರ್ವ ಕಾಲೇಜಿನ ಚೈತನ್ಯ ಜಿ. ಹೆಗಡೆ 595 ಅಂಕ ಪಡೆಯುವ ಮೂಲಕ ಜಿಲ್ಲಾ ಮಟ್ಟದಲ್ಲಿ ಅಗ್ರಸ್ಥಾನ ಪಡೆದಿದ್ದಾರೆ. ಭಟ್ಕಳದ ಅಂಜುಮನ್ ಮಹಿಳಾ ಪಪೂ ಕಾಲೇಜಿನ ಮೈಮುನಾ ಅಜ್ಮೀಬ್ 594 ಅಂಕಗಳೊಂದಿಗೆ ದ್ವಿತೀಯ, ಸಿದ್ದಾಪುರದ ಚೇತನಾ ಪದವಿ ಪೂರ್ವ ಕಾಲೇಜಿನ ರಘು ಶರಚ್ಚಂದ್ರ ಹೆಗಡೆ 593 ಅಂಕಗಳೊಂದಿಗೆ ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ.

ಸುದ್ದಿ ಸಿಂಚನ

ಸರಕಾರಿ ಮೋಹನ ಕೆ. ಶೆಟ್ಟಿ ಪಪೂ ಕಾಲೇಜು ಉತ್ತಮ ಸಾಧನೆ

ಹೊನ್ನಾವರ: ತಾಲೂಕಿನ ಸರಕಾರಿ ಮೋಹನ ಕೆ. ಶೆಟ್ಟಿ ಪಪೂ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಉತ್ತಮ ಸಾಧನೆಗೈದಿದ್ದಾರೆ. ಪರೀಕ್ಷೆಗೆ 264 ವಿದ್ಯಾರ್ಥಿಗಳು ಹಾಜರಾಗಿದ್ದು ಶೇ. 93.18 ಫಲಿತಾಂಶ ದಾಖಲಾಗಿದೆ. ಇವರಲ್ಲಿ ಕಲಾ ವಿಭಾಗದಲ್ಲಿ 6, ವಾಣಿಜ್ಯ ವಿಭಾಗದಲ್ಲಿ 28 ಮತ್ತು ವಿಜ್ಞಾನ ವಿಭಾಗದಲ್ಲಿ 11 ವಿದ್ಯಾರ್ಥಿಗಳು ಉನ್ನತ ಶ್ರೇಣಿ ಪಡೆದಿದ್ದಾರೆ. ಕಲಾ ವಿಭಾಗದಲ್ಲಿ ಸಾಧನಾ ಲಕ್ಷ್ಮಣ ನಾಯ್ಕ ಶೇ.93.33 ಅಂಕದೊಂದಿಗೆ ಪ್ರಥಮ ಸ್ಥಾನ, ಪೂಜಾ ಸುಬ್ರಾಯ ನಾಯ್ಕ ಶೇ.87.33 ಅಂಕದೊಂದಿಗೆ ದ್ವಿತೀಯ ಸ್ಥಾನ, ರಿಯಾ ಸಾವೇರ್‌ರೊಡ್ರಿಗೀಸ್ ಮತ್ತು ಸುಶ್ಮಿತಾ ಸುಬ್ರಾಯ ಅಂಬಿಗ ಶೇ.87.16 ಅಂಕದೊಂದಿಗೆ ತೃತೀಯ ಸ್ಥಾನ ಪಡೆದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಸಂಕೇತ ಈಶ್ವರ ಗೌಡ ಶೇ.98 ಅಂಕದೊಂದಿಗೆ ಪ್ರಥಮ, ಶರತ್ ಮಂಜುನಾಥ ನಾಯ್ಕ ಶೇ.96.33 ಅಂಕದೊಂದಿಗೆ ದ್ವಿತೀಯ ಹಾಗೂ ದಕ್ಷಾ ಮಂಜು ಗೌಡ ಶೇ.96 ಅಂಕದೊಂದಿಗೆ ತೃತೀಯ ಸ್ಥಾನ ಪಡೆದಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಪೂಜಾ ಗಣಪಯ್ಯ ಗೌಡ ಶೇ.95.5 ಅಂಕದೊಂದಿಗೆ ಪ್ರಥಮ, ಪ್ರಜ್ಞಾ ರಾಜು ನಾಯ್ಕ ಶೇ.89.83 ಅಂಕದೊಂದಿಗೆ ದ್ವಿತೀಯ ಹಾಗೂ ರಿತಿಕಾ ಮಂಜುನಾಥ ನಾಯ್ಕ ಶೇ.89.66 ಅಂಕದೊಂದಿಗೆ ತೃತೀಯ ಸ್ಥಾನ ಪಡೆದಿದ್ದಾರೆ.

ವಿಶ್ವದರ್ಶನ ಪಿಯು ಕಾಲೇಜಿಗೆ ಉತ್ತಮ ಫಲಿತಾಂಶ

ಯಲ್ಲಾಪುರ: ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಪಟ್ಟಣದ ವಿಶ್ವದರ್ಶನ ಪಿಯು ಕಾಲೇಜು ಉತ್ತಮ ಫಲಿತಾಂಶ ದಾಖಲಿಸಿದೆ. ಒಟ್ಟು ವಿದ್ಯಾರ್ಥಿಗಳಲ್ಲಿ ಶೇ. 43 ಮಂದಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಅನನ್ಯಾ ನಾಗೇಶ್ ಹೆಗಡೆ (ಶೇ.96.8) ಪ್ರಥಮ, ಸಿಂಚನಾ ವಿ. ಗೌಡ (ಶೇ.96.3) ದ್ವಿತೀಯ, ಗಣೇಶ ಶಾಂತಾರಾಮ ದೇಸಾಯಿ (ಶೇ.94.6) ತೃತೀಯ ಸ್ಥಾನ ಪಡೆದಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಆಶಾಬಿ ಸಲೀಂ ಶೇಖ್ (ಶೇ.98.3) ಪ್ರಥಮ, ಶ್ರೀಗಣೇಶ ವಿ. ಬೋಳಗುಡ್ಡೆ (ಶೇ.98) ದ್ವಿತೀಯ ಹಾಗೂ ದೀಪಾ ಪಟಗಾರ್ (ಶೇ.97.6) ತೃತೀಯ ಸ್ಥಾನ ಗಳಿಸಿದ್ದಾರೆ.

ಮುಂಡಗೋಡ ತಾಲೂಕಿಗೆ ಶೇ. 91.98ರಷ್ಟು ಫಲಿತಾಂಶ

• **ಕನ್ನಡಪ್ರಭ ವಾರ್ತೆ** ಮುಂಡಗೋಡ

ತಾಲೂಕಿನ 4 ಪದವಿ ಪೂರ್ವ ಕಾಲೇಜಿನಿಂದ ದ್ವಿತೀಯ ಪಿಯುಸಿ ಪರೀಕ್ಷೆ ಬರೆದ 636 ಜನರಲ್ಲಿ 585 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶೇ. 91.98ರಷ್ಟು ಫಲಿತಾಂಶ ದಾಖಲಾಗಿದೆ.

ಮುಂಡಗೋಡ ಸರಕಾರಿ ಪದವಿ ಪೂರ್ವ ಕಾಲೇಜಿನ 169 ಜನರಲ್ಲಿ 148 ಜನ ಉತ್ತೀರ್ಣರಾಗಿದ್ದು, ಶೇ. 87.57 ಫಲಿತಾಂಶ ಪಡೆದಿದೆ. ಮಳಗಿ ಸರಕಾರಿ ಪದವಿ ಪೂರ್ವ ಕಾಲೇಜಿನ 174 ಜನರಲ್ಲಿ 164 ಜನ ಉತ್ತೀರ್ಣರಾಗಿದ್ದು ಶೇ. 94.25 ಫಲಿತಾಂಶ ಪಡೆದಿದೆ. ಲೊಯೋಲಾ ಪದವಿಪೂರ್ವ ಕಾಲೇಜಿನ 238 ಜನರಲ್ಲಿ 130 ಜನ ಉತ್ತೀರ್ಣರಾಗಿದ್ದು ಶೇ. 96.64 ಫಲಿತಾಂಶ ಪಡೆದಿದೆ. ಮೊರಾರ್ಜಿ ದೇಸಾಯಿ ವಸತಿ ಪಪೂ ಕಾಲೇಜಿನ 55 ಮಕ್ಕಳಲ್ಲಿ 43 ಜನ ಉತ್ತೀರ್ಣರಾಗಿದ್ದಾರೆ.

ಮುಂಡಗೋಡ ಪಟ್ಟಣದ ಸರಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ಗೌರೀಶ ಗಣೇಶ ಇಂದೂರ್ಕರ ಕಲಾ ವಿಭಾಗದಲ್ಲಿ 584 ಅಂಕ ಪಡೆದು ತಾಲೂಕಿಗೆ ಪ್ರಥಮ ಸ್ಥಾನ ಗಳಿಸಿದ್ದಾನೆ.

ಇದೇ ಕಾಲೇಜಿನ ಮನೋಜ ಯಲ್ಲಪ್ಪ ಹೊಸೂರ 576 ಅಂಕ ಗಳಿಸಿದರೆ, ವಾಣಿಜ್ಯ ವಿಭಾಗದಲ್ಲಿ ಸಂಗೀತಾ ರಾಜು ಸುಬ್ಬಾಯವರ 570 ಅಂಕ ಗಳಿಸಿ ಉತ್ತಮ ಸಾಧನೆ ಮಾಡಿದ್ದಾಳೆ.

ಸಿದ್ಧಾರ್ಥ ಕಾಲೇಜು ವಿದ್ಯಾರ್ಥಿಗಳ ಉತ್ತಮ ಸಾಧನೆ

• **ಕನ್ನಡಪ್ರಭ ವಾರ್ತೆ** ಭಟ್ಕಳ

ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಸಿದ್ಧಾರ್ಥ ಪಪೂ ಕಾಲೇಜು ಭಟ್ಕಳ ಮತ್ತು ಸಿದ್ಧಾರ್ಥ ಸಂಯುಕ್ತ ಪಿಯು ಕಾಲೇಜು, ಶಿರಾಲಿಯ ವಿಜ್ಞಾನ ಹಾಗೂ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ.

ಸಿದ್ಧಾರ್ಥ ಪಪೂ ಕಾಲೇಜು ಭಟ್ಕಳ ವಿಜ್ಞಾನ ವಿಭಾಗದಲ್ಲಿ ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳಲ್ಲಿ ವಿಜ್ಞಾನ ವಿಭಾಗದಲ್ಲಿ ತನ್ಮಯ್ ಶೇಟ್ ಶೇ.98.33, ಪ್ರತೀಕ್ ಜಿಪ್ಕರ್‌ಹಾಗೂ ಭಾವನಾ ಪ್ರಭಾಕರ್ ನಾಯ್ಕ ಶೇ.97.76, ಪ್ರತೀಕ್ಷಾ ದೇವಾಡಿಗ ಶೇ.97.50 ಪಡೆದು ಕಾಲೇಜಿಗೆ ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಪಡೆದಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಮಹೇಶ್ವರ ನಾಯ್ಕ ಶೇ.92.00, ಸಹನಾ ಆರ್. ನಾಯ್ಕ ಶೇ.90.16, ಪ್ರೀತಮ್ ನಾಯ್ಕ ಶೇ.89.83 ಪಡೆದು ಕಾಲೇಜಿಗೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನಿಯಾಗಿದ್ದಾರೆ.

ಸಿದ್ಧಾರ್ಥ ಸಂಯುಕ್ತ ಪದವಿ ಪೂರ್ವ ಕಾಲೇಜು ಶಿರಾಲಿಯಲ್ಲಿ ಪರೀಕ್ಷೆಗೆ ಕುಳಿತ ಎಲ್ಲಾ ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ ಶೇ.100 ಫಲಿತಾಂಶ ಬಂದಿದೆ. ವಿಜ್ಞಾನ ವಿಭಾಗದಲ್ಲಿ ಗಣೇಶಕುಮಾರ್‌ಆಚಾರಿ ಶೇ.97.83, ಕೌಶಲ್ಯಾ ಮಾದೇವ ನಾಯ್ಕ ಶೇ.95.83, ಪೂಜಾ ರಾಜು ನಾಯ್ಕ ಶೇ.95.67 ಪಡೆದು ಕಾಲೇಜಿಗೆ ಪ್ರಥಮ, ದ್ವಿತೀಯ, ತೃತೀಯ ಸ್ಥಾನಿಯಾಗಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಪ್ರತೀಶ ಪಿ.ಎನ್. ಶೇ.93.17, ಐಶ್ವರ್ಯ ಎನ್. ನಾಯ್ಕ ಮತ್ತು ಕೃತಿಕಾ ಆರ್. ಶೇ.92.33, ವಿನಯ್ ಆರ್. ಸಿ. ಶೇ.90.83 ಪಡೆದು ಪ್ರಥಮ, ದ್ವಿತೀಯ ಹಾಗೂ ತೃತೀಯರಾಗಿದ್ದಾರೆ. ಭೌತಶಾಸ್ತ್ರ ವಿಷಯದಲ್ಲಿ 6 ವಿದ್ಯಾರ್ಥಿಗಳು, ರಸಾಯನ ಶಾಸ್ತ್ರದಲ್ಲಿ 1 ವಿದ್ಯಾರ್ಥಿ, ಗಣಿತ ವಿಷಯದಲ್ಲಿ 10 ವಿದ್ಯಾರ್ಥಿಗಳು, ಗಣಕಯಂತ್ರ ವಿಜ್ಞಾನ ವಿಷಯದಲ್ಲಿ 11 ವಿದ್ಯಾರ್ಥಿಗಳು, ಜೀವಶಾಸ್ತ್ರ ವಿಷಯದಲ್ಲಿ 4 ವಿದ್ಯಾರ್ಥಿಗಳು, ಕನ್ನಡ ವಿಷಯದಲ್ಲಿ 8 ವಿದ್ಯಾರ್ಥಿಗಳು ಹಿಂದಿ ವಿಷಯದಲ್ಲಿ 2 ವಿದ್ಯಾರ್ಥಿಗಳು 100 ಕ್ಕೆ 100 ಅಂಕ ಪಡೆದು ಸಾಧನೆಗೈದಿದ್ದಾರೆ. ಪರೀಕ್ಷೆಗೆ ಕುಳಿತ ಒಟ್ಟೂ ವಿದ್ಯಾರ್ಥಿಗಳಲ್ಲಿ 174 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 271 ವಿದ್ಯಾರ್ಥಿಗಳು ಪ್ರಥಮ ದರ್ಜೆ, 12 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.



ಬಂಗೂರ ನಗರ ಪಪೂ ವಿದ್ಯಾಲಯದ ಉತ್ತಮ ಸಾಧನೆ

• **ಕನ್ನಡಪ್ರಭ ವಾರ್ತೆ** ದಾಂಡೇಲಿ

ದಾಂಡೇಲಿ ಶಿಕ್ಷಣ ಸಂಸ್ಥೆಯ ಬಂಗೂರ ನಗರ ಪದವಿ ಪೂರ್ವ ವಿದ್ಯಾಲಯ 2ನೇ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದೆ. ವಿಜ್ಞಾನ ವಿಭಾಗದ ಶೇ.87 ಹಾಗೂ ವಾಣಿಜ್ಯ ವಿಭಾಗದ ಶೇ.84 ವಿದ್ಯಾರ್ಥಿಗಳು ಉತ್ತೀರ್ಣಗೊಂಡಿದ್ದು, ಕಾಲೇಜು ಒಟ್ಟು ಶೇ.86 ಫಲಿತಾಂಶ ದಾಖಲಿಸಿದೆ.

ವಿಜ್ಞಾನ ವಿಭಾಗದಲ್ಲಿ ಅಭಿಷೇಕ ಎಚ್.ಪಾಟೀಲ 582 ಅಂಕ ಪಡೆದು ಕಾಲೇಜಿಗೆ ಪ್ರಥಮ, ನವಿನಿಥ ಎನ್. ಕಾಮತ 581 ಅಂಕ ಪಡೆದು ದ್ವಿತೀಯ ಸ್ಥಾನ ಹಾಗೂ ಸುಹಾನಾ ಆರ್. ಕೆಸ್ನೂರ 574 ಅಂಕ ಪಡೆದು ತೃತೀಯ ಸ್ಥಾನ ಗಳಿಸಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಮೊಹಮ್ಮದ ಸಾಹಿಲ ಆರ್. ಕೆಸ್ನೂರ 577 ಅಂಕ ಪಡೆದು ಕಾಲೇಜಿಗೆ ಪ್ರಥಮ, ಫ್ಲೆವಿಟಾ ಫ್ ಪಿಂಟೋ 560 ಅಂಕ ಪಡೆದು ದ್ವಿತೀಯ ಹಾಗೂ ವಿನುತಾ ಆರ್. ಹನುಮಸಾಗರ 550 ಅಂಕ ಪಡೆದು ತೃತೀಯ ಸ್ಥಾನ ತಮ್ಮದಾಗಿಸಿಕೊಂಡಿದ್ದಾರೆ.

ವಾಣಿಜ್ಯ ವಿಭಾಗದ ಸ್ಟ್ಯಾಟಿಸ್ಟಿಕ್ ವಿಷಯದಲ್ಲಿ ಮೊಹಮ್ಮದ ಸಾಹಿಲ ಆರ್.ಕೆಸ್ನೂರ, ವಿಜ್ಞಾನ ವಿಭಾಗದ ಹಿಂದಿ ವಿಷಯದಲ್ಲಿ ಸುಹಾನಾ ಆರ್. ಕೆಸ್ನೂರ ಮತ್ತು ಪೂಜಾ ಜಿ. ಕೊಕರೆ, ಕನ್ನಡದಲ್ಲಿ ಪ್ರಿಯಾ ಪಿ. ಪೆಡ್ನೇಕರ್, ಗಣಿತದಲ್ಲಿ ಚೇತನಾ ಎಚ್. ಕರಲಕೊಪ್ಪ, ಕಂಪ್ಯೂಟರ್ ವಿಷಯದಲ್ಲಿ ತಸ್ಮಿಯಾ ಎ. ಬಾಸರಕೊಡ, ವಿನಿತ ವಿ. ನಾಯ್ಕ, ಸಾಜಿದಾ ಬಾನು ಶೇಖ 100ಕ್ಕೆ 100 ಅಂಕ ಪಡೆದಿದ್ದಾರೆ.

ಕಾರವಾರ ಸರ್ಕಾರಿ ಪಿಯು ಕಾಲೇಜಿಗೆ ಶೇ. 91.8

• **ಕನ್ನಡಪ್ರಭ ವಾರ್ತೆ** ಕಾರವಾರ

ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶದಲ್ಲಿ ಕಾರವಾರದ ಸರ್ಕಾರಿ ಪದವಿಪೂರ್ವ ಕಾಲೇಜು ಅತ್ಯುತ್ತಮ ಸಾಧನೆ ಮಾಡಿದ್ದು, ಒಟ್ಟಾರೆ ಶೇ. 91.8ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಪರೀಕ್ಷೆಗೆ ಹಾಜರಾದ ಒಟ್ಟು 487 ಹೊಸ ವಿದ್ಯಾರ್ಥಿಗಳ ಪೈಕಿ 447 ಮಂದಿ ತೇರ್ಗಡೆಯಾಗಿದ್ದಾರೆ. ಇವರಲ್ಲಿ ಬರೋಬ್ಬರಿ 101 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಹಾಗೂ 274 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಪಾಸ್ ಆಗಿದ್ದಾರೆ.



ಕಾಲೇಜಿನ ವಿಭಾಗವಾರು ಫಲಿತಾಂಶದಲ್ಲಿ, ವಿಜ್ಞಾನ ವಿಭಾಗದಲ್ಲಿ ಅತಿ ಹೆಚ್ಚು ಅಂದರೆ ಶೇ. 92.7 ರಷ್ಟು ವಿದ್ಯಾರ್ಥಿಗಳು ಯಶಸ್ಸು ಸಾಧಿಸಿದ್ದಾರೆ. ಈ ವಿಭಾಗದಿಂದ ಪರೀಕ್ಷೆ ಬರೆದ 287 ವಿದ್ಯಾರ್ಥಿಗಳಲ್ಲಿ 266 ಮಂದಿ ಉತ್ತೀರ್ಣರಾಗಿದ್ದಾರೆ. ಅಂತೆಯೇ ವಾಣಿಜ್ಯ ವಿಭಾಗದಲ್ಲಿ ಪರೀಕ್ಷೆಗೆ ಕುಳಿತ 149 ವಿದ್ಯಾರ್ಥಿಗಳ ಪೈಕಿ 137 ಮಂದಿ ಶೇ. 91.9 ಹಾಗೂ ಕಲಾ ವಿಭಾಗದಲ್ಲಿ 51 ವಿದ್ಯಾರ್ಥಿಗಳಲ್ಲಿ 44 ಮಂದಿ ಶೇ. 86.3 ತೇರ್ಗಡೆಯಾಗುವ ಮೂಲಕ ಉತ್ತಮ ಫಲಿತಾಂಶವನ್ನು ತಮ್ಮದಾಗಿಸಿಕೊಂಡಿದ್ದಾರೆ.

ಇನ್ನು ವಿಜ್ಞಾನ ವಿಭಾಗದಲ್ಲಿ ಚೇತನಾ ವಿ. ವೈದ್ಯ ಶೇ. 98.00 ಫಲಿತಾಂಶದೊಂದಿಗೆ ಪ್ರಥಮ ಸ್ಥಾನ ಗಳಿಸಿದ್ದಾರೆ. ಇದೇ ವಿಭಾಗದಲ್ಲಿ ಸಾರಾ ಸುದಾಮ್ ನಾಯ್ಕ್ (ಶೇ. 97.33) ದ್ವಿತೀಯ ಹಾಗೂ ಸಮ್ಮಿತ್ ಸುರೇಂದ್ರ ಬಾಗಲಕೋಟೆ (ಶೇ. 96.83) ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ.

ಕಲಾ ವಿಭಾಗದಲ್ಲಿ ಸಾಕ್ಷಿ ವಿನೋದ್ ನಾಯ್ಕ್ 585 ಅಂಕ ಗಳಿಸಿ ಮೊದಲ ಸ್ಥಾನ ಪಡೆದಿದ್ದರೆ, ಸೌಜನ್ಯ ವಿನೋದ್ ನಾಯ್ಕ್ 578 ಅಂಕ ಮತ್ತು ವೇಧಾ ದೀಪಕ್ ನಾಯ್ಕ್ 558 ಅಂಕಗಳೊಂದಿಗೆ ಕ್ರಮವಾಗಿ ದ್ವಿತೀಯ ಹಾಗೂ ತೃತೀಯ ಸ್ಥಾನ ಅಲಂಕರಿಸಿದ್ದಾರೆ.

ಇನ್ನು ವಾಣಿಜ್ಯ ವಿಭಾಗದಲ್ಲಿಯೂ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ತೋರಿದ್ದು, ಅನ್ನಪೂರ್ಣ ನಾಗರಾಜ್ ಶೇಟ್ 572 ಅಂಕ ಪಡೆಯುವ ಮೂಲಕ ಪ್ರಥಮ ಸ್ಥಾನ ಮುಡಿಗೇರಿಸಿಕೊಂಡಿದ್ದಾರೆ. ರೇಣುಕಾ ಉದಯ್ ನಗೇಕರ್565 ಅಂಕಗಳೊಂದಿಗೆ ದ್ವಿತೀಯ ಸ್ಥಾನ ಹಾಗೂ ನತಾಶಾ ಬೆನಿಟೊ ನಾಥ್ 563 ಅಂಕಗಳೊಂದಿಗೆ ತೃತೀಯ ಸ್ಥಾನ ಗಳಿಸಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಚೈತನ್ಯ ಹೆಗಡೆ ಜಿಲ್ಲೆಗೆ ಮೊದಲು

• **ಕನ್ನಡಪ್ರಭ ವಾರ್ತೆ** ಶಿರಸಿ

ತಾಲೂಕಿನ ಕೊಳಗಿಬೀಸ್ ಬಳಿ ಹೊಸ್ಮನೆಯ, ನಗರದ ಎಂಇಎಸ್ಸಿಯು ಕಾಲೇಜಿನ ವಿದ್ಯಾರ್ಥಿ ಚೈತನ್ಯ ರವಿ ಹೆಗಡೆ ವಿಜ್ಞಾನ ವಿಭಾಗದಲ್ಲಿ 595 ಅಂಕ ಪಡೆದು ಜಿಲ್ಲೆಗೆ ಮೊದಲ ಸ್ಥಾನ ಪಡೆದುಕೊಂಡಿದ್ದಾರೆ.

ಕೃಷಿ ಕುಟುಂಬದ ರವಿ ಹಾಗೂ ಚೇತನಾ ದಂಪತಿಯ ಪುತ್ರನಾದ ಚೈತನ್ಯ ಆರಂಭಿಕ ಶಿಕ್ಷಣವನ್ನು ಕನ್ನಡ ಮಾಧ್ಯಮದಲ್ಲಿ ಕೊಳಗಿಬೀಸ್ ಶಾಲೆಯಲ್ಲಿ ಕಲಿತು, ಪ್ರೌಢಶಿಕ್ಷಣವನ್ನು ಗೋಳಿ ಶ್ರೀ ಸಿದ್ಧಿವಿನಾಯಕ ಪ್ರೌಢ ಶಾಲೆಯಲ್ಲಿ ಪೂರೈಸಿದ್ದಾರೆ. ಬಳಿಕ ನಗರದ ಎಂಇಎಸ್ಸಿಯು ಕಾಲೇಜಿನಲ್ಲಿ ವಿಜ್ಞಾನ ವಿಷಯವನ್ನು ಆಯ್ಕೆ ಮಾಡಿಕೊಂಡಿದ್ದರು. ಭೌತಶಾಸ್ತ್ರ, ಗಣಿತ, ಸಂಸ್ಕೃತ, ಕಂಪ್ಯೂಟರ್‌ಸೈನ್ಸ್ ವಿಭಾಗದಲ್ಲಿ 100 ಅಂಕ ಪಡೆದ ಅವರು, ರಸಾಯನ ಶಾಸ್ತ್ರ ವಿಭಾಗದಲ್ಲಿ 98 ಅಂಕ ಪಡೆದಿದ್ದಾರೆ.

ಪ್ರತಿ ದಿನವೂ ಬಸ್ ಮೂಲಕ 11 ಕಿಮೀ ಪ್ರಯಾಣಿಸಿ ಕಾಲೇಜು ತಲುಪುತ್ತಿದ್ದ ಚೈತನ್ಯ, ಯಾವುದೇ ಕೋಚಿಂಗ್ ಅಥವಾ ವಿಶೇಷ ತರಗತಿಗಳ ನೆರವು ಪಡೆಯದೇ ಪ್ರತಿ ದಿನ ತಾನು ಕಲಿತ ವಿಷಯಗಳನ್ನು ಮನೆಗೆ ಬಂದು ಅಧ್ಯಯನ ನಡೆಸುತ್ತಿದ್ದ. ಸತತ ಸಾಧನೆಯ ಫಲವಾಗಿ ಈಗ ಉತ್ತಮ ಫಲಿತಾಂಶ ಲಭಿಸಿದೆ. ಕಂಪ್ಯೂಟರ್‌ಸೈನ್ಸ್ ವಿಭಾಗದಲ್ಲಿ ಎಂಜಿನಿಯರಿಂಗ್ ಕಲಿಯುವುದು ನನ್ನ ಮುಂದಿನ ಗುರಿ ಎಂದಿದ್ದಾನೆ.

ಪ್ರಗತಿ ಪಿಯು ಕಾಲೇಜಿಗೆ ಶೇ. 100



ಕುಮಟಾ: ಕಳೆದ 4 ವರ್ಷಗಳಿಂದ ಪೂರ್ಣ ಫಲಿತಾಂಶ ದಾಖಲಿಸುತ್ತಿರುವ ಶ್ರೀರಾಘವೇಶ್ವರ ಭಾರತೀ ಮಹಾಸ್ವಾಮಿಗಳ ಮಾರ್ಗದರ್ಶನ ಆಶೀರ್ವಾದದೊಂದಿಗೆ ನಡೆಯುತ್ತಿರುವ ತಾಲೂಕಿನ ಮೂರೂರು ವಿದ್ಯಾನಿಕೇತನ ಸಂಸ್ಥೆಯ ಪ್ರಗತಿ ಪಿಯು ಕಾಲೇಜಿನ ದ್ವಿತೀಯ ಪಿಯು ಫಲಿತಾಂಶ ಶೇ. 100ರಷ್ಟಾಗಿದೆ. ವಿಜ್ಞಾನ ವಿಭಾಗದಲ್ಲಿ ಸೌಜನ್ಯ ಹೆಗಡೆ ಶೇ.94.5, ಪೃಥ್ವಿ ಸರ್ವೇಶ್ವರ ಹೆಗಡೆ ಶೇ.92.6, ಸಮರ್ಥ ರೇವಣಕರ ಶೇ.90.5 ಅಂಕ ಗಳಿಸಿದ್ದಾರೆ. ವಾಣಿಜ್ಯ ವಿಭಾಗದಲ್ಲಿ ಮನಸ್ವಿನಿ ಭಟ್ಟ ಶೇ.92.6 ಅಂಕಗಳಿಸಿದ್ದಾರೆ.

ಸಿದ್ದಾಪುರ ಸರ್ಕಾರಿ ಪಪೂ ಕಾಲೇಜಿಗೆ ಶೇ. 92.13

ಸಿದ್ದಾಪುರ: ಪಟ್ಟಣದ ಸರ್ಕಾರಿ ಪಪೂ ಕಾಲೇಜಿನ ಪಿಯು ಪರೀಕ್ಷೆಯ ಫಲಿತಾಂಶ ಶೇ. 92.13ರಷ್ಟಾಗಿದೆ.

ಪರೀಕ್ಷೆಗೆ ಹಾಜರಾದ 178 ವಿದ್ಯಾರ್ಥಿಗಳಲ್ಲಿ 164 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಕಲಾ ವಿಭಾಗದಲ್ಲಿ ಶೇ.88.9, ವಾಣಿಜ್ಯ ವಿಭಾಗದಲ್ಲಿ ಶೇ.90.54, ವಿಜ್ಞಾನ ವಿಭಾಗದಲ್ಲಿ ಶೇ.96.77 ಫಲಿತಾಂಶ ದೊರೆತಿದೆ. ಕಲಾ ವಿಭಾಗದಲ್ಲಿ ಶ್ರವಣ ಭಟ್ಟ(88.53) ಪ್ರಥಮ, ಹಮ್ಮದ ಸಾಬ್(78.5) ದ್ವಿತೀಯ, ಹೇಮಂತ ನಾಯ್ಕ(76.33) ತೃತೀಯ, ವಾಣಿಜ್ಯ ವಿಭಾಗದಲ್ಲಿ ತೇಜಸ್ವಿನಿ ರೇವಣಕರ(96.83), ರೇಷ್ಮಾ ಮಡಿವಾಳ(90.17) ಪ್ರಥಮ, ವೇದಿಕಾ ಮಡಿವಾಳ(90.17) ದ್ವಿತೀಯ, ಫಾತಿಮಾ ಸುಹಾನಾ(89.67) ತೃತೀಯ, ವಿಜ್ಞಾನ ವಿಭಾಗದಲ್ಲಿ ಗೌತಮ ನಾಯ್ಕ(95.5) ಪ್ರಥಮ, ಎನ್. ರಾಘವ(94.83)ದ್ವಿತೀಯ, ಮಾನ್ಯ ಟಿ. (94.5) ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ.

ಸಾರ್ವಭೌಮ ಗುರುಕುಲಮ್ ಪಿಯು ಕಾಲೇಜಿಗೆ ಶೇ.100 ಫಲಿತಾಂಶ

ಗೋಕರ್ಣ: ಇಲ್ಲಿನ ವಿಷ್ಣುಗುಪ್ತ ವಿಶ್ವವಿದ್ಯಾಪೀಠದ ಸಾರ್ವಭೌಮ ಗುರುಕುಲಮ್ ಕಾಲೇಜು ದ್ವಿತೀಯ ಪಿಯುಸಿಯಲ್ಲಿ ಶೇ. 100 ಫಲಿತಾಂಶ ದಾಖಲಿಸಿದೆ. ವಾಣಿಜ್ಯ ವಿಭಾಗದಲ್ಲಿ ಪನ್ನಗ ಎಸ್. ಭಟ್(97.83), ರಾಮಚಂದ್ರ ಉಪಾಧ್ಯಾಯ ಮತ್ತು ಸುಮುಖ ಜಿ. ಹೆಗಡೆ (97.670), ವಿಜ್ಞಾನ ವಿಭಾಗದಲ್ಲಿ ದರ್ಶನ್ ಸಾಹಿ (95.33), ಸೌಭಾಗ್ಯಲಕ್ಷ್ಮಿ ಎಂ. ಬಿರಾದಾರ(94.50) ತ್ರಿಶಾ ನಾಗರಾಜ್ ರಾಯ್ಕರ್(90), ರಾಜಶ್ರೀ ಗಣಪತಿ ಗೌಡ (88.33) ಪಡೆದಿದ್ದಾರೆ. ಉಳಿದ ವಿದ್ಯಾರ್ಥಿಗಳು ಮೊದಲ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

बैंक ऑफ़ बड़ौदा
Bank of Baroda

ಪ್ರಾದೇಶಿಕ ಕಛೇರಿ,
ಶಿವಮೊಗ್ಗ

ಎಪಿಎಂಸಿ ಯಾರ್ಡ್ ಎದುರು, ಆಲ್ಕೋಳ ಸರ್ಕಲ್ ಹತ್ತಿರ,
ಸಾಗರ ರಸ್ತೆ, ಶಿವಮೊಗ್ಗ-577204, ಕರ್ನಾಟಕ, ಇಂಡಿಯಾ
Phone:9740377623
Email : recovery.rodupi@bankofbaroda.co.in

ಇ-ಹರಾಜು ಮಾರಾಟ ಸೂಚನೆ

ಅನುಬಂಧ- IV-A [ನಿಯಮ 6 (2) ಮತ್ತು ನಿಬಂಧನೆ 8 (6)]

2002ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 6(2) ಮತ್ತು 8(6)ರ ಪ್ರಾವಿಸೋಗಳೊಂದಿಗೆ ಓದಿಕೊಳ್ಳಬೇಕಾದ 2002ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಹಿತಾಸಕ್ತಿ ಜಾರಿ ಕಾಯಿದೆಯಡಿ ಇ-ಹರಾಜು ಸಾರ್ವಜನಿಕರಿಗೆ ವಿಸ್ತಾರವಾಗಿ, ಸಾಲಗಾರನಿ(ರಿ)ಗೆ/ಅಡಮಾನದಾರನಿ(ರಿ)ಗೆ ಹಾಗೂ ಜಾಮೀನುದಾರನಿ(ರಿ)ಗೆ ನಿರ್ದಿಷ್ಟವಾಗಿ ಸೂಚನೆ ನೀಡುವುದೇನೆಂದರೆ, ಕೆಳಕಂಡ ಚರ ಆಸ್ತಿಗಳು ಭದ್ರತಾ ಸಾಲಿಗರಿಗೆ (ಸೆಕ್ಯೂರ್ಡ್ ಕ್ರೆಡಿಟರ್)ರಿಗೆ ಅಡಮಾನವಾಗಿದ್ದು/ ಅವರ ಭಾರ್ಜನಲ್ಲಿದ್ದು, ಇದರ ಸ್ವಾಧೀನತೆಯನ್ನು ಸೆಕ್ಯೂರ್ಡ್ ಕ್ರೆಡಿಟರರವರಾದ, ಬ್ಯಾಂಕ್ ಆಫ್ ಬರೋಡಾದ ಅಧಿಕೃತ ಅಧಿಕಾರಿಗಳು ಪಡೆದುಕೊಂಡಿದ್ದು, ಇವುಗಳನ್ನು ಕೆಳಕಂಡ ಖಾತೆಯ(ಗಳ) ಬಾಕಿ ವಸೂಲಾತಿಗಾಗಿ ಎಲ್ಲಿ **ಹೇಗಿದೆಯೋ ಹಾಗೆಯೇ, ಎಲ್ಲಿ ಏನಿದೆಯೋ ಹಾಗೆಯೇ ಮತ್ತು ಏನು ಉಳಿದಿದೆಯೋ** ಅವುಗಳನ್ನು ಆಧಾರದ । ಮೇಲೆ ಮಾರಾಟ ಮಾಡಲಾಗುತ್ತದೆ. ಸಾಲಗಾರನ(ರ)/ಅಡಮಾನದಾರನ(ರ)/ಜಾಮೀನುದಾರನ(ರ) ಭದ್ರತಾ ಆಸ್ತಿ(ಗಳು)/ಬಾಕಿ/ಮೀಸಲು ಬೆಲೆ/ಇ-ಹರಾಜು ದಿನಾಂಕ ಮತ್ತು ಸಮಯ. ಇಎಂಡಿ ಮತ್ತು ಬಿಡ್ ಹೆಚ್ಚಿಸಬಹುದಾದ ಮೊತ್ತ ವಿವರಗಳು ಕೆಳಕಂಡತಿವೆ:

ಕ್ರ ಸಂ	ಶಾಖೆ / ಸಾಲಗಾರರ ಮತ್ತು ಅಡಮಾನವಾಗಿರಿಸಿದ ಆಸ್ತಿಯ ಮಾಲೀಕರು ಹೆಸರು ಮತ್ತು ವಿಳಾಸ	ಆಸ್ತಿಯ ವಿವರ	ಒಟ್ಟು ಬಾಕಿ	ಇ-ಹರಾಜಿನ ದಿನಾಂಕ ಮತ್ತು ಸಮಯ	1.ಆಸ್ತಿಯ ಮೀಸಲು ಬೆಲೆ 2.ಇಎಂಡಿ 3.ಕನಿಷ್ಠ ಬಿಡ್ಡಿನ ಹೆಚ್ಚುವರಿ ಮೊತ್ತ	ಆಸ್ತಿಯ ಸ್ವರೂಪ (ರಚನಾತ್ಮಕ / ಭೌತಿಕ)	ಆಸ್ತಿ ಪರಿಶೀಲನೆ ದಿನಾಂಕ ಮತ್ತು ಸಮಯ
01	ಎಪಿಎಂಸಿ ಯಾರ್ಡ್ ಶಿರಸಿ ಶಾಖೆ (6448) ಸಾಲಗಾರರು: ಶ್ರೀ ವಿನಾಯಕ ಬಂಗಾರೇಶ್ವರ ಹೆಗಡೆ ಬಿನ್ ಬಂಗಾರೇಶ್ವರ ಹೆಗಡೆ. ವಾಸ: ಯಡಹಳ್ಳಿ, ಕಲ್ಲಿನ ಕ್ರಾಸ್. ಹೆಗಡೆಕಟ್ಟೆ ರಸ್ತೆ ಹುಲಗೇಕೊಪ್ಪ ಶಿರಸಿ ತಾಲ್ಲೂಕು. ಉತ್ತರ ಕನ್ನಡ ಜಿಲ್ಲೆ. ಜಾಮೀನುದಾರರು: ಬಂಗಾರೇಶ್ವರ ಗೋವಿಂದ ಹೆಗಡೆ ಬಿನ್ ಗೋವಿಂದ ಹೆಗಡೆ ವಾಸ: ಯಡಹಳ್ಳಿ, ಕಲ್ಲಿನ ಕ್ರಾಸ್. ಹೆಗಡೆಕಟ್ಟೆ ರಸ್ತೆ ಹುಲಗೇಕೊಪ್ಪ ಶಿರಸಿ ತಾಲ್ಲೂಕು. ಉತ್ತರ ಕನ್ನಡ	ಅಡಮಾನದ ಆಸ್ತಿಯ ಸರ್ವೆ ನಂ. 36ಪ/ಹಿಸ್ಸಾ-1 ದಾಖಲಾತಿ ನಂ. 152700900700920699, ವಿಸ್ತೀರ್ಣ:00.01.06 ಗುಂಟಾಸ್ ಬಂಡಲಕೊಪ್ಪ, ಶಿರಸಿ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ. ಚಕ್ಕುಬಂಧಿ:- ಪೂರ್ವ: ಪ್ಲಾಟ್ ನಂ.99. ಪಶ್ಚಿಮ: ಕೆರೆದ ಪ್ಲಾಟ್ ಉತ್ತರ: ಪ್ಲಾಟ್ ನಂ.102ರ ಉಳಿದ ಭಾಗ. ದಕ್ಷಿಣ: ರಸ್ತೆ.	ರೂ. 4,03,111.60/- 9-04-2026 ರವರೆಗೆ + ಅನ್ವಯಿಸುವ ಬಡ್ಡಿ ಮತ್ತು ಇತರೆ ಶುಲ್ಕಗಳು ಜೊತೆ ಇಲ್ಲಿಯವರೆಗೆ ಕಟ್ಟಿದ ಬಡ್ಡಿ	18-05-2026 ಮಧ್ಯಾಹ್ನ 3.00 ಗಂಟೆಯಿಂದ ಸಂಜೆ 4.00 ರವರೆಗೆ	1.ರೂ. 24,00,000/- 2.ರೂ. 3,60,000/- 3.ರೂ. 50,000/-	ಸಾಂಕೇತಿಕ ಸ್ವಾಧೀನ	13-04-2026 ರಿಂದ 16-05-2026 ಬೆಳಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 2.00ಗಂಟೆವರೆಗೆ

ಮಾರಾಟದ ವಿವರವಾದ ಷರತ್ತು ನಿಬಂಧನೆಗಳಿಗಾಗಿ https://www.bankofbaroda.in/e-auction.htm ಹಾಗೂ https://baanknet.com ನಲ್ಲಿನ ಲಿಂಕ್ ಅನ್ನು ನೋಡಿ ಅಲ್ಲದೇ ಆಸಕ್ತಿಯುಳ್ಳ ಬಿಡ್ದಾರರು, ಅಧಿಕೃತ ಅಧಿಕಾರಿ: ಮೊ: 6362039725. ಗೆ ಸಹ ಕರೆ ಮಾಡಬಹುದು.

ಸ್ಥಳ: ಶಿರಸಿ ದಿನಾಂಕ: 09-04-2026

ಸಹಿ/- ಸೌರಭ್ ಅಗರ್ವಾಲ್, ಅಧಿಕೃತ ಅಧಿಕಾರಿ, ಬ್ಯಾಂಕ್ ಆಫ್ ಬರೋಡ

ಸಾರ್ವಜನಿಕ ನೋಟಿಸು

ಶ್ರೀಕಾಂತ ತಂದೆ ಹರಿಶ್ಚಂದ್ರ ಬಪಾಣೆ, ವಿಳಾಸ: ಹಳೇ ದಾಂಡೇಲಿ, ದಾಂಡೇಲಿ ಇವರು ಕೊಟ್ಟ ಮಾಹಿತಿ ವ ಅಧಿಕಾರದ ಮೇರೆಗೆ ಕೊಡುವ ಸಾರ್ವಜನಿಕ ನೋಟಿಸು ಏನೆಂದರೆ, ಹಳಿಯಾಳ ತಾಲೂಕು ಸಬ್‌ರಜಿಸ್ಟ್ರಾರ್ ಹದ್ದಿಯ ಪೈಕಿ ಗುಡ್ನಾಪುರ ಗ್ರಾಮದಲ್ಲಿರುವ ಬಿನ್ ಶೇತ್ಕಿ 1) ಬ್ಲಾಕ ನಂ. 34ಇ ನೇದ್ದರಲ್ಲಿ ಪ್ಲಾಟ ನಂ. 20 ಕ್ಷೇತ್ರ 51 ಚ.ಮೀ., 2) ಬ್ಲಾಕ ನಂ.34E ನೇದ್ದರಲ್ಲಿ ಪ್ಲಾಟ ನಂ. 23 ಕ್ಷೇತ್ರ 57 ಚ.ಮೀ., ಇ-ಸ್ವತ್ತಿನ ಸಂಖ್ಯೆ: 3-517-49/ಬ/20 ಅದೆ. ಈ ಎರಡು ಪ್ಲಾಟುಗಳು ನನ್ನ ಪಕ್ಷಗಾರರ ಮಾಲ್ಕಿ ವ ಕಬ್ಜಾ ವಹಿವಾಟಿಯಲ್ಲಿರುತ್ತದೆ. ಸದರಿ ಪ್ಲಾಟುಗಳಿಗೆ ಸಂಬಂದಪಟ್ಟಂತೆ ಹಳಿಯಾಳ ಸಬ್‌ರಜಿಸ್ಟ್ರಾರ್‌ಕಛೇರಿಯಲ್ಲಿ ನೋಂದಾದ ದಾಖಲಾತಿಗಳು 1) ಖರೀದಿ ಪತ್ರ ದಿ: 21-10-2022 ದಸ್ತಾವೇಜ ನಂ.1574/2022-23, 2) ಖರೀದಿ ಪತ್ರ ದಿ: 21-10-2022 ದಸ್ತಾವೇಜ ನಂ. 1576/2022-23, ಈ ಎರಡು ಅಸಲು/ಓರಿಜಿನಲ್ ಖರೀದಿ ಪತ್ರಗಳನ್ನು ದಿ: 01-04-2026 ರಂದು ಹಳಿಯಾಳ ಬಸ್ ನಿಲ್ದಾಣದಲ್ಲಿ ಬಸ್ ಹತ್ತುವ ಗದ್ದಲದಲ್ಲಿ ನಜರಚೂಕಿನಿಂದ ಕಳೆದು-ಕೊಂಡಿರುತ್ತಾರೆ. ಸದರಿ ಮೇಲ್ಕಾಣಿಸಿದ ಅಸಲ್/ಓರಿಜಿನಲ್ ಖರೀದಿ ಪತ್ರಗಳನ್ನು ಯಾವುದೇ ಬ್ಯಾಂಕ್ ವ ಸಂಘ ಸಂಸ್ಥೆಗಳಲ್ಲಿ ಅಡಮಾನವಾಗಿಟ್ಟಿರುವುದಿಲ್ಲ ಹಾಗೂ ಎಷ್ಟೆ ಹುಡುಕಿದರೂ ಸಿಕ್ಕಿರುವುದಿಲ್ಲ. ಒಂದು ವೇಳೆ ಸದರಿ ಮೇಲ್ಕಾಣಿಸಿದ ಅಸಲು/ಓರಿಜಿನಲ್ ಖರೀದಿ ಪತ್ರಗಳು ಯಾರಿಗಾದರೂ ಸಿಕ್ಕಿದ್ದಲ್ಲಿ ಅಥವಾ ಯಾವುದೇ ಹಣಕಾಸು ಸಂಸ್ಥೆಯಲ್ಲಿ ಅಡಮಾನ ಇಟ್ಟಿದ್ದಲ್ಲಿ ಈ ಕೆಳಗೆ ಕಾಣಿಸಿದ ವಿಳಾಸಕ್ಕೆ **ಈ ನೋಟೀಸ ಪ್ರಕಟವಾದ 07 ದಿವಸಗಳ ಒಳಗಾಗಿ** ಸಲ್ಲಿಸಬೇಕು ಅಂತಾ ಕೊಟ್ಟ ಸಾರ್ವಜನಿಕ ನೋಟಿಸು.

ಸಹಿ/-(**ಆಯ್.ಕೆ. ಹಾಸೀಮನವರ**) ವಕೀಲರು
1ನೇ ಕ್ರಾಸ, ಜಯನಗರ ಮೇಲಿನ ಹತ್ತಿರ,
ಜಯನಗರ, ಧಾರವಾಡ. ಮೊ.ನಂ. 90364 19679
ಧಾರವಾಡ ದಿನಾಂಕ : 09.04.2026

ಮರದಿಂದ ಬಿದ್ದು ಗಾಯಗೊಂಡಿದ್ದ ವ್ಯಕ್ತಿ ಆತ್ಮಹತ್ಯೆ

• **ಕನ್ನಡಪ್ರಭ ವಾರ್ತೆ** ಭಟ್ಕಳ

ತಾಲೂಕಿನ ಹೆಬಳೆಯ ಹೇರಿಕೇರಿಯಲ್ಲಿ ಜೀವನದಲ್ಲಿ ಜಿಗುಪ್ಸೆಗೊಂಡ ವ್ಯಕ್ತಿಯೋರ್ವ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಹೆಬಳೆ ಹೇರಿಕೇರಿ ನಿವಾಸಿ ತಿಮ್ಮಪ್ಪ ಬಡ್ಡ ಗೊಂಡ(47) ಮೃತರು. ತೆಂಗಿನ ಮರ ಏರಿ ಕಾಯಿ ತೆಗೆಯುವ ಕೆಲಸ ಮಾಡುತ್ತಿದ್ದ ಇವರು ಇತ್ತೀಚೆಗೆ ಮರ ಏರಿ ಕಾಯಿ ಕೊಯ್ಯುವಾಗ ಆಕಸ್ಮಿಕವಾಗಿ ಕಾಲು ಜಾರಿ ಬಿದ್ದು ಕೈಕಾಲು ಮುರಿದುಕೊಂಡಿದ್ದರು. ಅದೇ ನೋವನ್ನು ಸಹಿಸಿಕೊಳ್ಳಲಾಗದೆ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದೂ ದೂರಿನಲ್ಲಿ ದಾಖಲಿಸಲಾಗಿದೆ. ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಂದು ವಾರ್ಷಿಕ ಸಭೆ

ಯಲ್ಲಾಪುರ: ತಾಲೂಕಿನ ವಜ್ರಳ್ಳಿಯ ಭಾಗ್ಯಶ್ರೀ ಸಂಜೀವಿನಿ ಗ್ರಾಪಂ ಮಟ್ಟದ ಒಕ್ಕೂಟದ ವಾರ್ಷಿಕ ಸರ್ವಸಾಧಾರಣ ಸಭೆ ಮತ್ತು ಮಹಿಳಾ ದಿನಾಚರಣೆಯನ್ನು ಏ.10ರಂದು ಮಧ್ಯಾಹ್ನ 3 ಗಂಟೆಗೆ ವಜ್ರಳ್ಳಿಯ ಸರ್ವೋದಯ ಸಭಾಭವನದಲ್ಲಿ ಆಯೋಜಿಸಲಾಗಿದೆ.

ಗಾಂಜಾ ಸೇವನೆ; ಪ್ರಕರಣ ದಾಖಲು

ಕಾರವಾರ: ಸಾರ್ವಜನಿಕ ಸ್ಥಳದಲ್ಲಿ ಮಾದಕ ವಸ್ತು ಸೇವಿಸಿ ಓಡಾಡುತ್ತಿದ್ದ ಯುವಕನೊಬ್ಬನನ್ನು ಕಾರವಾರ ಗ್ರಾಮೀಣ ಠಾಣೆ ಪೊಲೀಸರು ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಕಡವಾಡದ ಹಳೇಕೋಟೆ ಜನತಾ ಕಾಲನಿ ನಿವಾಸಿ, 19 ವರ್ಷದ ರೋಷನ್ ಬೀನು ಅಂತೋನಿ ಎಂಬಾತನೇ ಮಾದಕ ವಸ್ತು ಸೇವನೆ ಮಾಡಿ ಪೊಲೀಸರ ಅತಿಥಿಯಾದ ಯುವಕ. ಆತನನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ ಗಾಂಜಾ ಸೇವಿಸಿರುವುದು ದೃಢಪಟ್ಟಿದೆ.

ಮುಂಡಳ್ಳಿ ದುರ್ಗಾಪರಮೇಶ್ವರಿ ದೇವಿ ಬ್ರಹ್ಮಕಲಶೋತ್ಸವ ಸಂಪನ್ನ

• **ಕನ್ನಡಪ್ರಭ ವಾರ್ತೆ** ಭಟ್ಕಳ

ತಾಲೂಕಿನ ಮುಂಡಳ್ಳಿಯ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಅಷ್ಟಬಂಧ ಬ್ರಹ್ಮಕಲಶೋತ್ಸವ ಕಾರ್ಯಕ್ರಮ ವಿಜೃಂಭಣೆಯಿಂದ ನೆರವೇರುತ್ತಿದ್ದು, ಗುರುವಾರ ದೇವಸ್ಥಾನದಲ್ಲಿ ಶತಚಂಡಿ ಹೋಮದ ಪೂರ್ಣಾಹುತಿ ಸಂಪನ್ನಗೊಂಡಿತು.

ಏ. 5ರಿಂದ ಆರಂಭಗೊಂಡಿದ್ದ ಕಾರ್ಯಕ್ರಮ ಗುರುವಾರ ರಾತ್ರಿ ಮುಕ್ತಾಯ ಕಂಡಿತು. ಗುರುವಾರ ಬೆಳಗ್ಗೆ 9 ಗಂಟೆಗೆ ಭಜನಾ ಕಾರ್ಯಕ್ರಮ, ಮಧ್ಯಾಹ್ನ ಮಹಾಪೂಜೆ, ತೀರ್ಥ ಪ್ರಸಾದ ವಿತರಣೆ, ಆಶೀರ್ವಚನ, ಮಂತ್ರಾಕ್ಷತೆ ನಡೆಯಿತು. ಮಧ್ಯಾಹ್ನ ನಡೆದ ಅನ್ನಸಂತರ್ಪಣೆಯಲ್ಲಿ ಸಾವಿರಾರು ಭಕ್ತರು ಪ್ರಸಾದ ಭೋಜನ ಸ್ವೀಕರಿಸಿದರು. ಸಂಜೆ ಭಜನೆ ಕಾರ್ಯಕ್ರಮ ಮತ್ತು ಗಣ್ಯರ ಮತ್ತು ದೇವಸ್ಥಾನದ ಪ್ರಮುಖರ ಉಪಸ್ಥಿತಿಯಲ್ಲಿ ಸಮಾರೋಪ ನಡೆಯಿತು.



ರಾತ್ರಿ ಶಾಲಾ ಮಕ್ಕಳಿಂದ ಮನೋರಂಜನೆ, ನೃತ್ಯ, ಶ್ರೀ ಮಹಾಸತಿ ಭಜನೆ ಮಂಡಳಿ ಬೆಳ್ನಿ ಇವರಿಂದ ಕುಣಿತ ಭಜನೆ ಗಮನ ಸೆಳೆಯಿತು. ರಾತ್ರಿ 9 ಗಂಟೆಗೆ ಪುತ್ತೂರು ಜಗದೀಶ ಆಚಾರ್ಯ ಮತ್ತು ಬಳಗದವರಿಂದ ಸಂಗೀತ ಗಾನ ಸಂಭ್ರಮ ನಡೆಯಿತು. ಕಾರ್ಯಕ್ರಮದ ಯಶಸ್ಸಿಗೆ ಊರ ನಾಗರಿಕರು, ಆಡಳಿತ ಮಂಡಳಿಯ ಅಧ್ಯಕ್ಷ ಎಸ್. ಬಿ. ಬೊಮ್ಮಾಯಿ ಹಾಗೂ ಸಮಿತಿಯ ಪದಾಧಿಕಾರಿಗಳು, ಸದಸ್ಯರು, ಸ್ವಯಂ ಸೇವಕರು, ಅರ್ಚಕರು ಶ್ರಮಿಸಿದರು.

Scanned with OKEN Scanner